
# ಪದಲಹರಿ

ನಖ; (ಬೆರಳು + ಇಚ)

ಕೈಕೆಯ ಪಶ್ಚಾತ್ತಾಪಕ್ಕೆ ಮಿಡಿದ ಕುವೆಂಪು ಅವರ ಮೃದು ಹೃದಯ ಆ ತಾಯಿಗೆ ಸಾಂತ್ವನವನ್ನು ಹೇಳುವ ರೀತಿಯೆ ವಿಶಿಷ್ಟ. ಅವರು ಆ ಮಾತೆಗೆ, ನೀನು ವಿಧಿಯ ಕೈ ಉಗುರು ಎಂದು ಹೇಳಿದ್ದಾರೆ. ಕವಿಯು ಬೆಟ್ಟನಲ್ಲಿ ಹುಟ್ಟಿದ ನಖವನ್ನು 'ಬೆರಳಿಚ' ಎಂಬ ನವೀನ ಪದ ಸೃಷ್ಟಿಸಿ ಪ್ರಯೋಗಿಸಿದ್ದಾರೆ.

ತಾಯಿಯೇ ಕೇಳು, ಸೃಷ್ಟಿಯ ಮಹದ್‌ವ್ಯೂಹ ರಚನೆಯಲ್ಲಿ ಪಾಪಿಗೆ ಉದ್ಧಾರವಿದೆ. ಬೆರಳಿನಲ್ಲಿ ಹುಟ್ಟಿದ ಉಗುರಿನ ಹರಿತವಾದ ಮೊನೆಯಿಂದ ಮಿಡಿಯುವ ಹಿಂಸೆಗೆ ತಂತಿಯು ತಾನು ವೀಣೆಯಿಂದ ಇಂಚರವನ್ನು ನೀಡುವಂತೆ, ನೀನು ವೈಣಿಕ ವಿಧಿಯ ಕೈ ಉಗುರು ಆಗಿರುವೆ. ಅಲ್ಲಿ ಹಾಗೆ ನಾದ ಹೊಮ್ಮಿ ಬಂದುದರಿಂದ ಈ ರೀತಿ ಇಂಪಾಗಿದೆ ಮತ್ತು ರಾಮಾಯಣ ಬೃಹದ್‌ಗೀತೆ ಭಗವದ್ ಸಾಗರವಾಗಿದೆ!

'ಪಾಪಿಗುದ್ಧಾರಮಿಹುದೌ
ಸೃಷ್ಟಿಯ ಮಹದ್‌ವ್ಯೂಹ ರಚನೆಯೊಳ್; ಕೇಳ್; ತಾಯಿ
ಬೆರಳಿಚದ ಕರ್ಮೊನೆಯ ಮಿಡಿವ ಹಿಂಸೆಗೆ ತಂತಿ ತಾಂ
ಬೀಣೆಯಿಂಚರವೀಯುವಂತೆ, ನೀನುಗುರಾಗಲಾ
ವೈಣಿಕ ವಿಧಿಯ ಕೈಗೆ, ಪೊಣ್ಮಿದತ್ತಿಂಪಾಯ್ತು ಮೇಣ್
ಭಗವದ್ ರಸಧಿಯಾಯ್ತು ರಾಮಾಯಣ ಬೃಹದ್‌ಗೀತೆ!'
(1.5:303–308)



## ಒಲ್ಮೆವುತ್ತು

'ಅಯ್ಯೊ ನಂಬುವೆನೆಂತುಟೀಯೊಲ್ಮೆವುತ್ತಿನೊಳೆ
ಹಗೆಯ ನಂಜಿನ ಹಾವು ಹೆಡೆಯೆತ್ತಿ ಹೊರಹೊಮ್ಮಿ
ಕಚ್ಚಿತೆಂಬುದನಯ್ಯೊ?'
(1.6: 55–57)

ಭರತನು ಮಂಥರೆಯ ಒಲುಮೆ ಕುರಿತು ಹೇಳುವ ಮಾತು ಇದಾಗಿದೆ. ಒಲುಮೆ ಮತ್ತು ಹುತ್ತ ಎರಡು ವಿಭಿನ್ನ ಭಾವಾಭಿವ್ಯಕ್ತಿಯ ಪದಗಳು. ಭರತನು ಮಂಥರೆಯ ಬಗ್ಗೆ ಹೊಂದಿದ್ದ ಉಜ್ವಲ ಒಲವಿನ ಭಾವ ಒಮ್ಮೆಗೆ ಇಲ್ಲವಾಗಿ, ಅಲ್ಲಿ ದ್ವೇಷದ ವಿಷ ಕಾರುವ ಹಾವು ನೆಲಸಿದೆ ಎಂದು ಕವಿ ಸೃಷ್ಟಿಸಿರುವ ಪದ 'ಒಲ್ಮೆವುತ್ತು'. ಅದು ಕವಿಯು ಸೂಕ್ಷ್ಮವಾಗಿ ವಿರುದ್ಧ ಭಾವಗಳನ್ನು ಸೆಳೆದು ಬಂಧಿಸುವ ಮನೋವೈಜ್ಞಾನಿಕ ವಿಶ್ಲೇಷಣೆಯ ಸಾಮರ್ಥ್ಯದ ಕುಶಲ ಪದ ಸೃಷ್ಟಿಗೆ ಸಾಕ್ಷಿಯಾಗಿದೆ. ಮಂಥರೆಯ ಆಂತರ್ಯದ ಚಿತ್ರಶಿಲ್ಪದಂತಿದೆ ಆ ಪದಸೃಷ್ಟಿ.

## ಪಲಾನ್ನ

ಪಲಾನ್ನ (ನಾ). ಮಾಂಸವನ್ನು ಬೆರಸಿ ಮಾಡಿದ ಅನ್ನ; (ಪಲ + ಅನ್ನ)

ಚಿತ್ರಕೂಟದಲ್ಲಿ ಒಂದು ದಿನ ರಾಮಸೀತೆಯರು ನೀರಿಗಿಳಿದು ನೀರಾಟವಾಡುತ್ತ ಮನದಣಿಯೆ ಮೀಯುತ್ತಾರೆ. ಸೂರ್ಯ ನಡುಗೆತ್ತಿಗೆ ಏರಲು ಅವರನ್ನು ಲಕ್ಷ್ಮಣ ಕೂಗಿ ಕರೆಯುವನು. ಅದನ್ನು ಕೇಳಿ ರಾಮ, 'ತಮ್ಮನು ನಲ್ಲುಣಿಸಿಗಾಗಿ ಕಾಯುತ್ತಿರುವನು' ಎಂದು ಪತ್ನಿಗೆ ಹೇಳುವನು. ಅವರಿಬ್ಬರೂ ಗಿರಿ ಹತ್ತಿ ದಣಿದು ಬಂದಾಗ ಅವರು ಸವಿವ ಊಟವನ್ನು ಕವಿ 'ಮೃದು ಪಲಾನ್ನವಿದೊ ಕಮ್ಮಗೆ ಮೂಗನೊಲಿಸುತಿದೆ' ಎಂದು ವರ್ಣಿಸಿರುವರು.

ಕುವೆಂಪು ಅವರ ಮೂಗು ಆಘ್ರಾಣಿಸಿ ಸವಿದ ಮಾಂಸದ ರುಚಿಯ ಭಾವಕೋಶದಿಂದ ಸಹಜವಾಗಿ ಸೃಷ್ಟಿಗೊಂಡ ಪದ 'ಪಲಾನ್ನ'. 'ಪಲ'ಕ್ಕೆ ಹಣ್ಣು; ಫಲ ಎಂದು ಒಂದು ಅರ್ಥವಿದ್ದರೆ, ಇನ್ನೊಂದು ಅರ್ಥ ಮಾಂಸ. ಮಾಂಸವನ್ನು ಬೆರಸಿ ಮಾಡಿದ ಅನ್ನ 'ಪಲಾನ್ನ'. ಆ 'ಪಲಾನ್ನ'ವೆ ಇಂದು ನಾವು ಮಾಡುವ ಸವಿಯಾದ ಮಾಂಸದ ಅನ್ನ ಪಲಾವು, ಬಿರಿಯಾನಿ.